# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 165
ಸದಸ್ಯರ ಹೆಸರು : ಶ್ರೀ ಅ. ದೇವೇಗೌಡ
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 14.02.2024

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಇರುವ ಒಟ್ಟು ಬಸ್ಸುಗಳ ಸಂಖ್ಯೆ ಎಷ್ಟು; (ಡೀಸಲ್ ಹಾಗೂ ವಿದ್ಯುತ್ ಚಾಲಿತ ಬಸ್ಸುಗಳ ವಿವರ ನೀಡುವುದು) | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ 5643 ಡೀಸೆಲ್ ಬಸ್ಸುಗಳು ಹಾಗೂ 504 ವಿದ್ಯುತ್ ಚಾಲಿತ ಬಸ್ಸುಗಳು ಒಳಗೊಂಡಂತೆ ಒಟ್ಟು 6147 ಬಸ್ಸುಗಳು ಇರುತ್ತವೆ. |
| ಆ. | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಅನುಪಯುಕ್ತಗೊಂಡಿರುವ ಬಸ್ಸುಗಳ ಒಟ್ಟು ಸಂಖ್ಯೆ ಎಷ್ಟು; ಅನುಪಯುಕ್ತಗೊಂಡಿರುವ ಬಸ್‌ಗಳ ವಿಲೇವಾರಿ ಮಾಡಲು ಇಲಾಖೆಯು ಯಾವ ಕ್ರಮಗಳನ್ನು ಕೈಗೊಂಡಿದೆ. | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ 2023-24ನೇ ಸಾಲಿನಲ್ಲಿ ಇಲ್ಲಿಯವರೆಗೆ (ದಿನಾಂಕ: 07.02.2023ರಂತೆ) ಒಟ್ಟು 645 ವಾಹನಗಳನ್ನು ಅನುಪಯುಕ್ತಗೊಳಿಸಲಾಗಿದೆ.<br><br>ಅನುಪಯುಕ್ತಗೊಂಡಿರುವ ಬಸ್‌ಗಳ ವಿಲೇವಾರಿ ಮಾಡಲು ಕೈಗೊಳ್ಳುವ ಕ್ರಮಗಳು ಕೆಳಗಿನಂತಿದೆ.<br><br>• ತಾಂತ್ರಿಕ ಶಾಖೆಯಿಂದ ಅನುಪಯುಕ್ತ ವಾಹನಗಳನ್ನು ಆರ್.ಟಿ.ಒ ಇವರಿಂದ ನೊಂದಣಿ ಸಂಖ್ಯೆಯನ್ನು ರದ್ದುಪಡಿಸಿ ತಃಖ್ತೆಯನ್ನು ತಯಾರಿಸಿ ಒಟ್ಟು ವಾಹನಗಳ ಮಾಹಿತಿಯನ್ನು ಉಗ್ರಾಣ ಇಲಾಖೆಗೆ ಹರಾಜು ಪ್ರಕ್ರಿಯೆ ಮಾಡಲು ಕಳುಹಿಸಿಕೊಟ್ಟ ನಂತರ ಭಾರತ ಸರ್ಕಾರದ ಅಧೀನ ಸಂಸ್ಥೆಯಾದ ಮೆ\|\| ಎಂ.ಎಸ್.ಟಿ.ಸಿ ಮೂಲಕ ಇ-ಹರಾಜು ನಡೆಸಲಾಗುತ್ತದೆ.<br><br>• ಮೆ\|\| ಎಂ.ಎಸ್.ಟಿ.ಸಿ ಇ-ಹರಾಜಿನಲ್ಲಿ ಬಿಡ್ದು ದರಗಳು ಬಂದ ನಂತರ ಹೆಚ್-1 ಬಿಡ್ದುದಾರರಿಗೆ ವಿಲೇವಾರಿ ಮಾಡಲಾಗುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| ಇ. | 2023ನೇ ಸಾಲಿನಲ್ಲಿ ಸಾರಿಗೆ ಸಂಸ್ಥೆಯಿಂದ ಎಷ್ಟು ಹೊಸ ಬಸ್‌ಗಳನ್ನು (ಡೀಸಲ್ ಹಾಗೂ ವಿದ್ಯುತ್ ಚಾಲಿತ) ಖರೀದಿಸಲು ಒಪ್ಪಿಗೆ ನೀಡಲಾಗಿದೆ? (ವಿವರ ನೀಡುವುದು) | 2023ನೇ ಸಾಲಿನಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ 820 ಬಿ.ಎಸ್-6 ಡೀಸೆಲ್ ವಾಹನಗಳನ್ನು ಖರೀದಿಸಲು ಹಾಗೂ 320 ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್ಸುಗಳು, 120 ಹವಾನಿಯಂತ್ರಣ ರಹಿತ ಎಲೆಕ್ಟ್ರಿಕ್ ಬಸ್ಸುಗಳು, 10 ಡಬ್ಬಲ್ ಡೆಕ್ಕರ್ ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್ಸುಗಳನ್ನು ಜಿಸಿಸಿ ಮಾದರಿಯಲ್ಲಿ ಆಚರಣೆ ಮಾಡಲು ಒಪ್ಪಿಗೆ ನೀಡಲಾಗಿದೆ. |

ಸಂಖ್ಯೆ: ಟಿಡಿ 13 ಟಿಸಿಕ್ಯೂ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು